# ಅಂತಿಮ ಹಂತದಲ್ಲಿ 'ಚಾಂಪಿಯನ್'ನ ರೋಚಕ ಪಯಣ

**ದಾವಣಗೆರೆಯ ಜನರ ಸಮ್ಮುಖದಲ್ಲೇ ನಡೆಯುವ ಈ ಸೆಣಸಾಟದಲ್ಲಿ ಯಾರು ಗೆಲ್ಲುತ್ತಾರೆ ಎನ್ನುವುದು ನಿರ್ಧಾರವಾಗಲಿದೆ. ರಾಜ್ಯದ ಮಹಿಳಾ ಚಾಂಪಿಯನ್‌ಗಾಗಿ ಕರ್ನಾಟಕ ಕಾಯುತ್ತಿದೆ.**

ಸಮುದ್ರ, ಕಾಡು, ಮರಳುಗಾಡು, ಅರಮನೆ–ಹೀಗೆ ವಿವಿಧ ಜಾಗಗಳಲ್ಲಿ ಕಳೆದ ಹಲವಾರು ದಿನಗಳಿಂದ ಸಾಹಸಮಯ ಆಟಗಳ ಮೂಲಕ ಕರ್ನಾಟಕದ ಟೆಲಿವಿಷನ್ ಪ್ರೇಕ್ಷಕರ ಗಮನ ಸೆಳೆದಿರುವ ರಿಯಲಿಟಿ ಶೋ 'ಚಾಂಪಿಯನ್' ಇದೀಗ ತನ್ನ ಅಂತಿಮ ಹೊಸ್ತಿಲಿಗೆ ಬಂದು ನಿಂತಿದೆ.

ಕಲರ್ಸ್ ಸಮೂಹದ ಹೊಸ ಕೂಸು ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುತ್ತಿದೆ ಈ ಜನಪ್ರಿಯ ರಿಯಾಲಿಟಿ ಶೋ. ರಾಜ್ಯದ ನಾನಾ ಮೂಲೆಗಳಿಂದ ಬಂದ ಹದಿನೈದು ಹುಡುಗಿಯರು ತಾವು ಹುಟ್ಟು ಚಾಂಪಿಯನ್ ಎಂದು ಸಾಬೀತುಪಡಿಸಲು ದೇಶದ ವಿವಿಧ ಸ್ಥಳಗಳಲ್ಲಿ ಸೆಣಸಾಡಿದ್ದಾರೆ. ಒಂದೊಂದೇ ವಾರ ಒಬ್ಬೊಬ್ಬರೇ ಎಲಿಮಿನೇಟ್ ಆಗುತ್ತ ಬಂದು ಕೊನೆಗೆ ಉಳಿಯುವವರು ಚಾಂಪಿಯನ್ ಆಗುತ್ತಾರೆ.

ಖ್ಯಾತ ಸುದ್ದಿ ನಿರೂಪಕರಾಗಿದ್ದ ರೆಹಮಾನ್ ಹಾಸನ್ ಬಿಗ್‌ಬಾಸ್ ಶೋದಲ್ಲಿ ಭಾಗವಹಿಸಿ ಹೊರಬಂದ ನಂತರ ಮನರಂಜನಾ ಟೆಲಿವಿಷನ್ ಕಡೆಗೆ ಮುಖ ಮಾಡಿದ್ದು 'ಚಾಂಪಿಯನ್' ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡುತ್ತಿದ್ದಾರೆ.

'ಚಾಂಪಿಯನ್'ನ ಗ್ರ್ಯಾಂಡ್ ಫಿನಾಲೆ ಅಕ್ಟೋಬರ್ 1 ರಂದು ದಾವಣಗೆರೆಯಲ್ಲಿ ನಡೆಯಲಿದೆ. ಹದಿನೈದು ಹುಡುಗಿಯರ ಜೊತೆಗೆ ವೈಲ್ಡ್ ಕಾರ್ಡ್ ಎಂಟ್ರಿ ಮೂಲಕ ಬಂದಿರುವ ಹುಡುಗಿಯೂ ಸೇರಿದರೆ ಒಟ್ಟು ಹದಿನಾರು ಧೀರೆಯರು ಈ ಪ್ರಶಸ್ತಿಗಾಗಿ ಸೆಣಸಿದ್ದಾರೆ. ಬರೀ ಹುಡುಗಿಯರೇ ಭಾಗವಹಿಸಿದ ಈ ರಿಯಾಲಿಟಿ ಶೋ ಗ್ರ್ಯಾಂಡ್ ಫಿನಾಲೆ ಅಕ್ಟೋಬರ್ 15 ಮತ್ತು 16ರಂದು ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗಲಿದೆ.

ಚಾಂಪಿಯನ್‌ನ ಇನ್ನೊಂದು ವಿಶೇಷವೆಂದರೆ ಇದರಲ್ಲಿ ಸ್ಪರ್ಧಿಗಳನ್ನು ಎಲಿಮಿನೇಟ್ ಮಾಡಲು ಬೇರೆ ರಿಯಾಲಿಟಿ ಶೋಗಳ ಮಾದರಿಯಲ್ಲಿ ಯಾವುದೇ ಪಬ್ಲಿಕ್ ವೋಟಿಂಗ್ ಇರಲಿಲ್ಲ ಎನ್ನುವುದು. ಹುಡುಗಿಯರಿಗೆ ನೀಡಲಾಗುವ ಟಾಸ್ಕ್‌ಗಳಲ್ಲಿ ಯಾರು ಗೆಲ್ಲುತ್ತಾರೋ ಅವರು ಉಳಿಯುತ್ತಾರೆ. ಸೋತವರು ಮನೆಗೆ ಹೋಗುತ್ತಾರೆ. ಗ್ರ್ಯಾಂಡ್ ಫಿನಾಲೆಯಲ್ಲೂ ಅಷ್ಟೆ, ದಾವಣಗೆರೆಯ ಜನರ ಸಮ್ಮುಖದಲ್ಲೇ ನಡೆಯುವ ಈ ಸೆಣಸಾಟದಲ್ಲಿ ಯಾರು ಗೆಲ್ಲುತ್ತಾರೆ ಎನ್ನುವುದು ನಿರ್ಧಾರವಾಗಲಿದೆ. ರಾಜ್ಯದ ಮಹಿಳಾ ಚಾಂಪಿಯನ್‌ಗಾಗಿ ಕರ್ನಾಟಕ ಕಾಯುತ್ತಿದೆ.







